International Journal of Kannada Research 2016; 2(2): 24-26

International Journal of Kannada Research
www.kannadajournal.com

ISSN: 2454–5813
IJSR 2016; 2(2): 24-26
© 2016 IJKS
www.kannadajournal.com
Received: 05-12-2015
Accepted: 06-01-2016

**ದೊರೇಶ ಸಂಶೋಧನಾ ವಿದ್ಯಾರ್ಥಿ**
ಡಾ.ಪಿ,ಎಂ,ಗಂಗಾಧರಯ್ಯ, ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿ.ವಿ.. ತುಮಕೂರು.

**ಕನ್ನಡ ಅಧ್ಯಯನ ಕೇಂದ್ರ**
ಡಾ.ಪಿ,ಎಂ,ಗಂಗಾಧರಯ್ಯ, ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿ.ವಿ.. ತುಮಕೂರು.

**ತುಮಕೂರು ವಿ.ವಿ. ತುಮಕೂರು**
ಡಾ.ಪಿ,ಎಂ,ಗಂಗಾಧರಯ್ಯ, ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿ.ವಿ.. ತುಮಕೂರು.'

**Correspondence**
**ದೊರೇಶ ಸಂಶೋಧನಾ ವಿದ್ಯಾರ್ಥಿ**
ಡಾ.ಪಿ,ಎಂ,ಗಂಗಾಧರಯ್ಯ, ಸಹಾಯಕ ಪ್ರಾಧ್ಯಾಪಕರು ಮತ್ತು ಮಾರ್ಗದರ್ಶಕರು ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿ.ವಿ.. ತುಮಕೂರು.

# ನಾಗತಿಹಳ್ಳಿ ಚಂದ್ರಶೇಖರ ಕಥೆಗಳಲ್ಲಿ ಗ್ರಾಮಬದುಕಿನಚಿತ್ರಣ

**ದೊರೇಶ ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಕೇಂದ್ರ, ತುಮಕೂರು ವಿ.ವಿ. ತುಮಕೂರು**

ಬರಹದ ಮೂಲಕ ಸಾಮಾಜಿಕ ಮತ್ತು ಸಾಂಸ್ಕೃತಿಕ ತಲ್ಲಣಗಳನ್ನು ಅನಾವರಣಗೊಳಿಸಿದ ಹಲವು ಸಾಹಿತಿಗಳು ನಮ್ಮ ನಡುವೆ ಕಾಣುತ್ತಾರೆ. ಆದರೆ ಸಾಹಿತ್ಯ–ಸಂಸ್ಕೃತಿ–ಕಲೆಗಳ ಮೂಲಕ ಕನ್ನಡ ಸಾರಸ್ವತ ಲೋಕದಲ್ಲಿ ಅನನ್ಯತೆ ಮೆರೆದ ಲೇಖಕರು ವಿರಳ. ಸಾಹಿತ್ಯ ಮತ್ತು ಸಿನಿಮಾ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸಿ ಸಮಾಜಮುಖೀ ಚಿಂತನೆಗಳನ್ನು ನಿರ್ವಚಿಸಿದ ಹಾಗೂ ಸಾಂಸ್ಕೃತಿಕ ಬಹು ಆಯಾಮದ ನೆಲೆ ಗ್ರಹಿಸಿ ಅದರ ಒಳನೋಟಗಳನ್ನು ವಿಸ್ತರಿಸಿದವರಿದ್ದಾರೆ. ಸಮಾಜಿಕ ವಿವೇಕದಿ ಹೊಸ ಹುಡುಕಾಟ ಮಾಡಿ ಜಾಗೃತಿ ಮೂಡಿಸಿದ ಚಿಂತಕರಿದ್ದಾರೆ. ಅವರಲ್ಲಿ ಪಿ,ಲಂಕೇಶ್, ಬರಗೂರು ರಾಮಚಂದ್ರಪ್ಪ, ಗಿರೀಶ್ ಕಾರ್ನಾಡ್, ಸಿದ್ಧಲಿಂಗಯ್ಯ ಮುಂತಾದವರದ್ದು ಬಹುಮಖ್ಯ ಹೆಸರು. ಇಂತಹ ಬರಹಗಾರರ ನಡುವೆ ನಿಲ್ಲಬಹುದಾದ ಮತ್ತೊಂದು ಪ್ರಮುಖ ಹೆಸರು ನಾಗತಿಹಳ್ಳಿ ಚಂದ್ರಶೇಖರ ಅವರದ್ದು. ಸಾಹಿತ್ಯದ ಜೊತೆ ಜೊತೆಗೆ ಸಿನಿಮಾಯಾನವನ್ನೂ ಕೈಗೊಂಡ ನಾಗತಿಹಳ್ಳಿ ಈ ನಾಡು ಕಂಡ ಬಹುಮುಖ್ಯ ಕಥೆಗಾರ.

ಕಥೆ, ಕಾದಂಬರಿ, ಅಂಕಣಬರಹ, ಪ್ರವಾಸಸಾಹಿತ್ಯ – ಹೀಗೆ ವಿವಿಧ ಪ್ರಕಾರಗಳಲ್ಲಿ ಬರವಣಿಗೆಯಿಂದ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಅವರ ಅನುಭವವನ್ನು ಹೊರಹಾಕಿದ್ದು ಕಥಾಜಗತ್ತು. ಕಥಾ ಪರಂಪರೆಯಲ್ಲಿ ಸೃಜನಶೀಲ ಕಥೆಗಾರನನ್ನಾಗಿ ಅನಾವರಣಗೊಳಿಸಿತು. ಇವರು ತಮ್ಮ ಕನಸುಗಾರಿಕೆ ಹಾಗೂ ಜೀವನ ಶ್ರದ್ಧೆಯನ್ನು ಮೈಗೂಡಿಸಿಕೊಂಡು ಗ್ರಾಮೀಣ ಪರಿಸರದ ಹಳ್ಳಿಯ ಭಂಗ–ಬವಣೆಗಳ ಮಡುವನ್ನು ಹಾಯ್ದ ಕಥೆಗಾರ. ಆದ್ದರಿಂದಲೇ ತಮ್ಮ ಕಥೆಗಳಲ್ಲಿ ಸ್ಥಿತ್ಯಂತರ ಘಟ್ಟದಲ್ಲಿ ನಿಂತಿರುವ ಗ್ರಾಮೀಣ ಬದುಕುಗಳು ಹಾಗೂ ಅವು ಎದುರಿಸುವ ಸವಾಲುಗಳನ್ನು ಓದುಗರ ಕಣ್ಣಿಗೆ ರಾಚುವಂತೆ ನಿರೂಪಿಸಿದ್ದಾರೆ. ಹಳ್ಳಿಯ ತನ್ನ ಮೂಲ ಅನುಭವಗಳನ್ನು ಸಾಂದ್ರೀಕರಿಸಿ ಭಾರತದ ಗ್ರಾಮ ಸಮುದಾಯಗಳು ಪ್ರಸ್ತುತ ದಿನಗಳಲ್ಲಿ ಎದುರಿಸುತ್ತಿರುವ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ತಲ್ಲಣಗಳನ್ನು ಚರ್ಚಿಸಿದ್ದಾರೆ. ಈ ನಿಟ್ಟಿನಲ್ಲಿ ಇವರ ಕಥೆಗಳು ಗ್ರಾಮ ಸಮಾಜ ಒಳಗುಮಾಡಿಕೊಳ್ಳಲೇಬೇಕಾದ ಸಹಬಾಳ್ವೆಯತತ್ತ್ವ ಹಾಗೂ ಅದರ ಪ್ರಮುಖ್ಯತೆಯನ್ನು ವಿವರಿಸುತ್ತವೆ. ವೈಚಾರಿಕತೆ, ಪ್ರೇಮ, ಹಳ್ಳಿಯ ಸೊಬಗು ಹಾಗೂ ಅದರ ಸೊಗಸು–ಸೌಂದರ್ಯಗಳನ್ನು ನಿರೂಪಿಸಿದ ಮಾದರಿಯಲ್ಲೇ ಒಳಗಿರುವ ಜಾತಿ ಬೇಗುದಿಗಳು, ಬಡತನ, ಕೃಷಿಯ ವಿಮುಖತೆ, ಕೌಟುಂಬಿಕ ಗುಳೆ, ಅದರಿಂದಾಗುವ ಅನಾಹುತಗಳು, ಕೋಮುಗಲಭೆ, ರಾಜಕೀಯ ವಿಕೇಂದ್ರೀಕರಣದ ಲಾಭ–ನಷ್ಟಗಳನ್ನು ತಮ್ಮ ಕಥನದ ಒಳಗೆ ತಂದು ಚರ್ಚಿಸಿದ್ದಾರೆ. ಈ ಹೊತ್ತು ಇಡಿಯ ಗ್ರಾಮ ಸಮುದಾಯವನ್ನು ನೋಡಬೇಕಾದ ಕ್ರಮ ಹಾಗೂ ಹೊಸ ಭರವಸೆಗಳೊಂದಿಗೆ ಮರುಕಟ್ಟುವ ತುರ್ತಿನ ಅಗತ್ಯತೆ ತಿಳಿಸುವಲ್ಲಿ ಇವರ ಕಥೆಗಳು ಯಶಸ್ವಿಯಾಗುತ್ತವೆ. ಹಳ್ಳಿಯ ಬದುಕನ್ನು ಅನುಭವದ ನೆಲೆಯಿಂದ ತಮ್ಮ ಗ್ರಾಮಮುಖಿ ಚಿಂತನೆಯ ಮೂಸೆಯಲ್ಲಿ ಹದಗೊಳಿಸುವ ನಾಗತಿಹಳ್ಳಿಯವರ ಗ್ರಾಮ ವಿವೇಕ ಮಾದರಿ ಎನಿಸುತ್ತದೆ. ಭಾರತದಂತಹ ದೇಶಗಳ ಬೇರು ಇರುವುದು ಗ್ರಾಮಗಳಲ್ಲೇ ಎಂಬುದು ನಿರ್ವಿವಾದ. ಆದರೆ ಆ ಬೇರು ಶಿಥಿಲವಾಗುತ್ತಿರುವ ಕಟುವಾಸ್ತವದ ಚಿತ್ರಣವನ್ನು ತಲಸ್ಪರ್ಶಿಯಾಗಿ ನಿರ್ವಚಿಸಿರುವುದು ಚಿಂತನಾಶೀಲವಾದುದು. ಗ್ರಾಮಸಮುದಾಯ, ಅದರ ಒಳಗಿನ ಸಂಕೀರ್ಣತೆಗಳು, ಬದಲಾವಣೆಯ ಹೊಸ್ತಿಲಲ್ಲಿ ನಿಂತಿರುವ ಹಳ್ಳಿಗಳ ಬದುಕು, ಅವುಗಳನ್ನು ಮೂರ್ತ ಮತ್ತು ಅಮೂರ್ತವಾಗಿ ಕಬಂದ ಬಾಹುವಿನ ಮೂಲಕ ಆವರಿಸಿಕೊಳ್ಳುತ್ತಿರುವ ಜಾಗತೀಕರಣದ ಬಹುರೂಪ ಹಾಗೂ ಅವು ಮುಖಾಮುಖಿಯಾಗುವ ಬಗೆಗಳನ್ನು ಸೂಚ್ಯವಾಗಿ ಗುರುತಿಸಿದ್ದಾರೆ. ಅಲ್ಲದೆ ಅದರಿಂದಾಗುವ ಅಪಾಯಗಳನ್ನು ಎದುರಿಸುತ್ತಲೇ ನಿಜ ಸೊಗಡನ್ನು ನಿರ್ಮಿಸಬೇಕೆಂದು ಹೇಳುವ ನಾಗತಿಹಳ್ಳಿ ಅವರ ನಮ್ಮತನದ ಮಾದರಿ ಪ್ರಸ್ತುತ ಗ್ರಾಮಜೀವನಕ್ಕೆ ನೀಡಿದ ವಿವೇಕವಾಗಿದೆ. ಗ್ರಾಮ ಬದುಕಿನೊಳಗಿರುವ ಅಜ್ಞಾನ, ದಬ್ಬಾಳಿಕೆ, ಬಲಿತ

ವರ್ಗಗಳ ಶೋಷಣೆಯ ಮನಸ್ಥಿತಿಗಳು ಹಾಗೂ ಇವು ತಂದೊಡ್ಡುವ ಅನಾಹುತಗಳನ್ನು ಕಟ್ಟಿಕೊಡುತ್ತಲೇ, ಗ್ರಾಮ ಬದುಕಿನ ಛಿದ್ರೀಕರಣವನ್ನು ನಿರೂಪಿಸಿದ್ದಾರೆ.

ತಮ್ಮ ಗ್ರಾಮಮುಖೀ ಬರಹಗಳಲ್ಲಿ ಸಮಾಜದ ಸ್ಥಾಪಿತ ಸತ್ಯಗಳನ್ನು ಒರಗೆ ಹಚ್ಚಿ ನೆಲಸಂಸ್ಕೃತಿಯನ್ನು ಭಿನ್ನ ನೆಲೆಯಲ್ಲಿ ಅವಲೋಕಿಸಿದ್ದಾರೆ. ವ್ಯವಸ್ಥೆಯನ್ನು ವೈನೋಧಿಕವಾಗಿ ವಿಡಂಬನೆ ಮಾಡಿ ಓದುಗರಲ್ಲಿ ಅಂತರ್ ನಿರೀಕ್ಷೆಯನ್ನುಂಟುಮಾಡುತ್ತಾ ಬದಲಾವಣೆಯ ಮನಸ್ಥಿತಿ ರೂಪಿತವಾಗಬೇಕೆಂಬುದನ್ನು ಕಟ್ಟಿಕೊಟ್ಟಿದ್ದಾರೆ. ಗ್ರಾಮ ಸಂಸ್ಕೃತಿಯು ಅವಸಾನದ ಅಂಚಿನಲ್ಲಿದ್ದಾಗ ಅದು ಮತ್ತೊಂದನ್ನು ಮರುಕಟ್ಟಿಕೊಳ್ಳುವ ಬಗೆ ಯಾವುದು? ಎದುರುಗೊಳ್ಳಬಹುದಾದ ಅಪಾಯಗಳು ಯಾವುವು? ಎಂಬುದನ್ನು ನಿರೂಪಿಸುತ್ತಲೇ ಗ್ರಾಮಸಮುದಾಯಗಳು ನಿರ್ಮಿಸಿಕೊಳ್ಳಬೇಕಾದ ಸಂಸ್ಕೃತಿಹಬ್ಬದ ಮಾದರಿ ಹಾಗೂ ಅದರ ತುರ್ತನ್ನು ತಮ್ಮ ಕಥನಗಳಲ್ಲಿ ತರುತ್ತಾರೆ. ಭಾರತದಂತಹ ಗ್ರಾಮಪರಂಪರೆಯ ಚಿತ್ರಣ, ಅವುಗಳ ಪಲ್ಲಟದ ಸ್ಥಿತಿ ಹಾಗೂ ಆತಂಕಗಳನ್ನು ಚಿತ್ರಿಸುವುದರ ಜೊತೆಗೆ ಗ್ರಾಮಗಳ ಅಸ್ತಿತ್ವ ಮತ್ತು ಸಂಸ್ಕೃತಿಗಳ ಮರುಕಟ್ಟುವಿಕೆಯನ್ನು ಅಭಿವ್ಯಕ್ತಿಸಿ ಸಂಕಥನದ ಮಾದರಿಯನ್ನು ನಿರೂಪಿಸುತ್ತಾರೆ. ಅವರ ಪ್ರವಾಸ ಕಥನಗಳೂ ಕೂಡ ಕೇವಲ ವರದಿಗಳಾಗದೆ ಗ್ರಾಮಸಂಸ್ಕೃತಿಯ ಕವಚ ಹೊದ್ದು ವಿವಿಧ ರಾಷ್ಟ್ರಗಳ ಸಾಂಸ್ಕೃತಿಕ ಪ್ರಜ್ಞೆಯನ್ನು ಮುಖಾಮುಖಿಯಾಗಿಸಿವೆ. ನಾಗತಿಹಳ್ಳಿ ಅವರು ತಮ್ಮ ಕಥನಗಳಲ್ಲಿ ರೂಪಿಸಿರುವ ಹಳ್ಳಿಯ ಚಿತ್ರಣವು ಇಡಿಯ ಭಾರತದ ಗ್ರಾಮ ವ್ಯವಸ್ಥೆಯ ಕನ್ನಡಿ.ಹಾಗಾಗಿ ಈ ಹೊತ್ತಿನ ಹಳ್ಳಿಗಳು ಅಭಿವೃದ್ಧಿಯಾಗಬೇಕಾಗಿರುವುದು ಯಾವ ನೆಲೆಯಲ್ಲಿ? ಎನ್ನುವ ಚಿಂತನೆಗೆ ನಮ್ಮನ್ನು ಒಳಗು ಮಾಡುತ್ತವೆ. ರಾಜಕೀಯ ಐಲಾಟಗಳು ಗ್ರಾಮೀಣರ ಬದುಕಿನ ಮೇಲೆ ಉಂಟುಮಾಡುತ್ತಿರುವ ಅಪಾಯವನ್ನು ಅವರ ಕಥೆಗಳಲ್ಲಿ ಗುರುತಿಸಬಹುದು. ಆ ಮೂಲಕ ಭವಿಷ್ಯದ ಗ್ರಾಮಭಾರತವನ್ನು ಕಟ್ಟಬೇಕಾಗಿರುವ ದಾರಿ ಕಂಡುಕೊಂಡು ದೇಸೀ ಸಮೃದ್ಧವಾಗಲು ಗ್ರಾಮೀಣತೆಯು ಎಲ್ಲಾ ನೆಲೆಯಿಂದಲೂ ಸಬಲೀಕರಣವಾಗಬೇಕೆಂಬ ಬಹುಮುಖ್ಯ ಚಿಂತನೆ ಇವರ ಕಥೆಗಳಲ್ಲಿದೆ.

ಎಲ್ಲಾ ಕಾಲದಲ್ಲಿಯೂ ಸಾಹಿತ್ಯದ ಹುಟ್ಟು ಆಯಾಯ ಸಂಸ್ಕೃತಿಯ ಬಿಕ್ಕಟ್ಟುಗಳಲ್ಲಿಯೇ ಮೈದಾಳುತ್ತದೆ. ಈ ಬಿಕ್ಕಟ್ಟುಗಳನ್ನು ನಿವಾರಿಸಿಕೊಳ್ಳಲು ಸಾಹಿತ್ಯದ ಓದು ಮತ್ತು ರಚನೆಗಳು ಮುಂಚೂಣಿಗೆ ಬಂದಿರುತ್ತವೆ. ಇವುಗಳ ಕಾಳಜಿ ಬಹುತೇಕವಾಗಿ ಸಂಸ್ಕೃತಿಯ ವಾಸ್ತವ ಪ್ರಕ್ರಿಯೆ ಅರಿತುಕೊಳ್ಳುವುದಾಗಿರುತ್ತದೆ. ಇಂತಹ ಪ್ರಕ್ರಿಯೆಯಲ್ಲಿ ಸಾಂಸ್ಕೃತಿಕ ರಾಜಕಾರಣದ ಆಯಾಮಗಳೂ ಹುದುಗಿರುತ್ತವೆ. ಬರಹಗಾರರು ತಾತ್ವಿಕ ಚೌಕಟ್ಟೊಂದನ್ನು ಕಟ್ಟಿಕೊಳ್ಳಲು ಇದು ಕಾರಣವಾಗುತ್ತದೆ. ಹಾಗಾಗಿ ನಾಗತಿಹಳ್ಳಿ ಚಂದ್ರಶೇಖರ ಅವರು ತಮ್ಮ ಸೃಜನಶೀಲ ಅಭಿವ್ಯಕ್ತಿಗೆ ಒತ್ತಾಸೆಯಾಗಬಲ್ಲ ಗ್ರಾಮ್ಯಬದುಕನ್ನು ಚರ್ಚಿಸಲು,ಚಿಂತಿಸಲು ವೈಚಾರಿಕ ಮಾದರಿಗಳನ್ನು ಅನುಸರಿಸಿರುವುದನ್ನು ಕಾಣಬಹುದು. ಇವರ ಗ್ರಾಮಮುಖೀ ಕಥೆಗಳ ಪಾತ್ರಗಳು ಈ ನಿಲುವಿಗೆ ಸಾಕ್ಷಿಯಾಗಿವೆ. ಬನ್ನೇರಿ, ಚಿಕ್ಕೀರಿ, ಸಿದ್ರಾಮ, ರಾಮಣ್ಣ, ಭವಾನಿ, ಮಯೂರಿ, ಕುಳ್ಳಭಟ್ರು ಮುಂತಾದ ಪಾತ್ರ ಸೃಷ್ಟಿಯ ಮೂಲಕ ಅಲಕ್ಷಿತರು, ಹಿಂದುಳಿದವರು ಹಾಗೂ ಅಂಚಿನವರು, ಪುರುಷ ಕ್ರೌರ್ಯದಡಿ ದಮನಕ್ಕೆ ಒಳಗಾದರೂ ಮನೆವಾಳ್ತನದಿ ಗಟ್ಟಿಗಿತ್ತಿಯರಾದ ಹೆಣ್ಣುಮಕ್ಕಳು, ಮುಸ್ಲಿಂಮರು, ದಲಿತರು, ಶೋಷಿತರು ಹೀಗೆ ಎಲ್ಲರನ್ನೂ ತಮ್ಮ ಕಥೆಗಳಲ್ಲಿ ಮುನ್ನಲೆಗೆ ತರುತ್ತಾರೆ. ಆ ಮೂಲಕ ಅವರ ಅಸ್ತಿತ್ವ ಮತ್ತು ಅಸ್ಮಿತೆಯ ಸವಾಲುಗಳು ಎಂತಹವು? ಎಂಬ ತಿಳುವಳಿಕೆ ಕಟ್ಟಿಕೊಟ್ಟಿದ್ದಾರೆ. ನಾಗತಿಹಳ್ಳಿಯ ಗ್ರಾಮಪರಿಸರದ ಕಥೆಗಳಲ್ಲಿ ಅಗತ್ಯಕ್ಕಿಂತ ಅಸ್ತಿತ್ವ ಅತ್ಯಂತ ಮಹತ್ವವನ್ನು ಪಡೆದುಕೊಳ್ಳುತ್ತದೆ. ಏಕೆಂದರೆ ಬಹುಮುಖ್ಯವಾಗಿ ಗ್ರಾಮೀಣ ಪರಿಸರದ ಕೆಳಸ್ತರದ ಪ್ರಜ್ಞೆಯ ಪಾತ್ರಗಳು ಸಮಾಜದ ದಿಟವಾದ ಅಸ್ತಿತ್ವಕ್ಕೆ ಕನ್ನಡಿ ಹಿಡಿಯುತ್ತವೆ. ಈ ಕಾರಣಕ್ಕಾಗಿಯೇ ಕಥೆಯೆಂಬುದು ಸಾಮಾಜಿಕ ಕಥನವೇ ಹೊರತು ಅದೊಂದು ಕೇವಲ ಘಟನೆಯಾಗಲಾರದು. ಅಂದರೆ ಕಥೆಯನ್ನು ಒಂದು ಪ್ರಕ್ರಿಯೆಯಾಗಿ ನೋಡುವ ನೆಲೆ ಹಾಗೂ ಕಾರ್ಯ–ಕಾರಣ ನಂಟಿನಲ್ಲಿ ಆಕಾರಪಡೆದ ಪ್ರಕ್ರಿಯೆಗಳು ಯಾವುದೇ ನಿರ್ದಿಷ್ಟತೆಗೆ ಸೀಮಿತವಾಗಿರುವುದಿಲ್ಲ. ಇಂತಹ ಪ್ರಕ್ರಿಯೆಯ ಒಳಗಡೆಯೇ ಆಯಾಯ ಸಾಂಸ್ಕೃತಿಕ ಬಿಕ್ಕಟ್ಟುಗಳು ಹೇಗೆ ಏರ್ಪಡುತ್ತವೆ ಎಂಬ ಸಂಗತಿಯನ್ನು ನಾಗತಿಹಳ್ಳಿ ತಮ್ಮ ಕಥನದೊಳಗೆ ತರುತ್ತಾರೆ. ಈ ಬಿಕ್ಕಟ್ಟುಗಳ ಪರಿಣಾಮವಾಗಿಯೇ ಗ್ರಾಮೀಣ ಬದುಕಿನೊಳಗೆ ಸಾಕಷ್ಟು ಬಗೆಯ ಅಡ್ಡ ಪರಿಣಾಮಗಳು ಉಂಟಾಗುತ್ತಿವೆ. ಇಂತಹ ಅಡ್ಡ ಪರಿಣಾಮಗಳು ಬದುಕಿನ ಲಯಗಳನ್ನು ಹದಗೆಡಿಸಲು ಹೇಗೆ ಕಾರಣವಾಗುತ್ತವೆ? ಎಂಬ ಅರಿವು ನಾಗತಿಹಳ್ಳಿಯವರ ಕಥೆಗಳಲ್ಲಿ ಹೇರಳವಾಗಿ ಸಿಗುತ್ತದೆ. ತಮ್ಮ ಗ್ರಾಮಮುಖೀ ಚಿಂತನೆಗಳಿಗೆ ತಾವೇ ಚೌಕಟ್ಟನ್ನು ರೂಪಿಸಿಕೊಂಡು ದೇಸೀ ಮೂಲದ ಯಾವ ಅಸ್ತಿತ್ವವೂ ಅಳಿಯದ ರೀತಿ ಹೊಸಬಗೆಯ ಮರುನಿರೂಪಣೆಯಲ್ಲಿ ಇವರ ಕಥನಗಳು ಯಶಸ್ವಿಯಾಗಿವೆ. ಮನುಷ್ಯ ಗುಣಗಳ ಸಹಜ ಪ್ರಕ್ರಿಯೆಯೊಂದು ನಿರ್ಮಿಸುವ ಸಾಮಾಜಿಕ ಸನ್ನಿವೇಶ ಯಾವ ಬಗೆಯವು? ಅನ್ನುವುದು ಇವರ ಕಥೆಗಳ ಹುಡುಕಾಟವಾಗಿದೆ. ಈ ರೀತಿಯ ಹುಡುಕಾಟವು ಕೇವಲ ಬದುಕಿನ ದ್ವಂದ್ವಾತ್ಮಕ ನಿಲುವುಗಳನ್ನು ಮಾತ್ರ ಮುನ್ನಲೆಗೆ ತಾರದೆ, ಅದರಿಂದ ಉಂಟಾಗುವ ಪರಿಣಾಮದ ನೆಲೆಗಳು ಹೇಗಿರುತ್ತವೆ ಹಾಗೂ ಈ ಪರಿಣಾಮಗಳಿಂದ ಗ್ರಾಮಸಂಸ್ಕೃತಿಯ ಮೇಲೆ ಉಂಟಾಗುವ ಬಿಕ್ಕಟ್ಟುಗಳು ಎಂತಹವು? ಎಂಬ ಲೋಕಸತ್ಯವನ್ನು ನಿರೂಪಿಸಿದೆ. ಬದಲಾಗುತ್ತಿರುವ ಕಾಲದಲ್ಲಿ ಗ್ರಾಮ ಬದುಕು ಪಲ್ಲಟವಾಗುತ್ತಿರುವುದನ್ನು ತಮ್ಮ ಕಥನಗಳಲ್ಲಿ ನಿರೂಪಿಸಿದ್ದಾರೆ. ಹಳ್ಳಿಗಳಿಗೆ ಅಧಿಕಾರ ನೀಡಲು ರೂಪಿಸಿದ ಪಂಚಾಯತ್ ರಾಜ್ ವ್ಯವಸ್ಥೆಯ ಆಶಯ ಹಾಗೂ ಅದರ ಹಿಂದೆಯೇ ರೂಪುಗೊಂಡ ಪಕ್ಷ ರಾಜಕೀಯ ವ್ಯವಸ್ಥೆಗಳು ಹಳ್ಳಿಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳನ್ನು ಮೂಲೆ ಗುಂಪಾಗಿಸುತ್ತಿರುವ ಕ್ರಮಗಳನ್ನು ತಮ್ಮ ಕಥೆಗಳಲ್ಲಿ ತಂದಿದ್ದಾರೆ. ಈ ಹೊತ್ತು ಹಳ್ಳಿಗಳು ಸಾಂಸ್ಕೃತಿಕವಾಗಿ ಚಲನಶಿಲವಾಗಿಲ್ಲ,ಕ್ರಿಯಾಶೀಲವಾಗಿಲ್ಲ ಈ ಬಗೆಯ ಸತ್ಯದ ನಡುವೆಯೂ ಹಳ್ಳಿಗಳಲ್ಲಿ ಚಿಂತನಶೀಲತೆಯನ್ನು ಬೆಳೆಸಬೇಕು, ಎಷ್ಟೇ ನಿಧಾನವಾದರೂ ಜಡ್ಡುಗಟ್ಟುತ್ತಿರುವ ಗ್ರಾಮ ಬದುಕಿಗೆ ಚಿಂತನೆ ಚಿಕಿತ್ಸೆ,ಚೈತನ್ಯ ನೀಡಬೇಕಾದ ಜರೂರು ಹಾಗೂ ಅದರ ಅಗತ್ಯತೆ ಇವರ ಗ್ರಾಮಮುಖತ್ವದ ಕಥೆಗಳಲ್ಲಿ ಢಾಳಾಗಿ ಗೋಚರವಾಗುತ್ತದೆ.

ನಾಗತಿಹಳ್ಳಿ ಅವರು ಶ್ರಮಜೀವಿಯ ಸಂಸ್ಕಾರಹೊಂದಿ ಸಾಂಸ್ಕೃತಿಕ ಲೋಕದ ಅನನ್ಯತೆಯನ್ನು ತಮ್ಮ ಕಥೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಭಾರತದ ಹಳ್ಳಿಯ ಬದುಕು ಹೊಸತನಕ್ಕೆ ಪ್ರಭಾವವಾಗುತ್ತಿರುವ ಈ ಸಂದರ್ಭದಲ್ಲಿ ಅವರ ಕತೆಗಳಲ್ಲಿ ಚಿತ್ರಿತವಾಗಿರುವ ಗ್ರಾಮಸಮಾಜದ ಸ್ಥಿತ್ಯಂತರಗಳು ಹಾಗೂ ಮರುಸ್ಥಾಪಿಸಲು ಇರುವ ದಾರಿಯ ಹೊಸ ಆಲೋಚನೆಗಳು ಸಧ್ಯದ ವಿವೇಕವಾಗಿದೆ. ಅದು ಆಗಬೇಕಾಗಿರುವ ತುರ್ತು ಹೌದು. ನಾಗತಿಹಳ್ಳಿಯವರು ಕಳೆದ ಇಪ್ಪತ್ತೈದು ವರ್ಷಗಳಿಂದ ಭಾರತದ ಗ್ರಾಮ ಸಮಾಜವನ್ನು ಮತ್ತು ಅದರ ಸ್ಥಿತ್ಯಂತರಗಳನ್ನು

ಎದುರಾದ ಕಥೆಗಾರ. ಸಮಾಜದ ಬಡತನ, ಅಸಮಾನತೆ, ಅವಮಾನ ಹಾಗೂ ಇವುಗಳ ನಡುವಿನಿಂದ ಸ್ಫೋಟಗೊಳ್ಳಬಹುದಾದ ಸಾಮಾಜಿಕ ಸತ್ಯದ ಹಾದಿಯ ಹುಡುಕಾಟಗಳು ಇವರನ್ನು ಮತ್ತು ಇವರ ಸೃಜನಶೀಲತೆಯನ್ನು ಪ್ರಭಾವಿಸಿವೆ. ನಾಗತಿಹಳ್ಳಿಚಂದ್ರಶೇಖರ ಅವರು ಈ ಪ್ರಭಾವಗಳ ಹಿನ್ನಲೆಯಲ್ಲಿ ತನ್ನ ಸೃಜನಶೀಲತೆಯನ್ನು ತೀವ್ರಗೊಳಿಸಿಕೊಳ್ಳುತ್ತಾ ಗ್ರಾಮ ಸಮುದಾಯಕ್ಕೆ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಹೊಸ ಆದರ್ಶದ ಕನ್ನಡಿಗಳಂತೆ ತಮ್ಮ ಕಥನವನ್ನು ನಿರೂಪಿಸಿದ್ದಾರೆ.

***ಪರಾಮರ್ಶನ ಕೃತಿಗಳು***


1. ಕಥಾಯಾತ್ರೆ–ನಾಗತಿಹಳ್ಳಿ ಚಂದ್ರಶೇಖರ.ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ,ಬೆಂಗಳೂರು.
2. ಗ್ರಾಮಮುಖಿ–ಸಂ.ಶಿವಕುಮಾರ ಕಾರೇಪುರ
3. ಕನ್ನಡ ಕಥನ ಸಾಹಿತ್ಯ:ಸಣ್ಣಕಥೆ–ಲೇ.ಜಿ,ಎಸ್,ಅಮೂರ. ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
4. ನಕ್ಷೆ–ನಕ್ಷತ್ರ– ಡಾ.ಬಸವರಾಜ ಕಲ್ಗುಡಿ. ಕನ್ನಡ ಮತ್ತುಸಂಸಸ್ಕೃತಿ ಇಲಾಖೆ.ಬೆಂಗಳೂರು
5. ಡಾ.ಬೆಸಗರಹಳ್ಳಿ ರಾಮಣ್ಣ– ಕೇಶವರೆಡ್ಡಿ ಹಂದ್ರಾಳ.ಸಾಹಿತ್ಯ ಅಕಾಡೆಮಿ.ನವದೆಹಲಿ